ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :

ಅ) 19.26 ಎಕರೆ

ಆ) ಬಂದಿದೆ : ಮಡಿಕೇರಿ ನರಗಾಭಿವೃದ್ಧಿ ಪ್ರಾಧಿಕಾರ ಈ ಜಾಗದ ಪೈಕಿ 5.00 ಎಕರೆ ಸ್ಥಳದಲ್ಲಿ ನಿವೇಶನಗಳನ್ನು ರಚಿಸಿ ಹಂಚಲು ಪ್ರಸ್ತಾಪಿಸಿದ್ದು ಸಾರ್ವಜನಿಕರ ಪ್ರತಿಭಟನೆ ಮೇರೆಗೆ ಸದರಿ ಪ್ರಾಧಿಕಾರವು ಪ್ರಸ್ತಾವನೆಯನ್ನು ಕೈಬಿಟ್ಟಿರುತ್ತದೆ.

ಇ) 29 ಜನರು

ಮಹಾನಗರ ಸಭೆಯ ಎನ್.ಎಂ.ವಾಡಿಯಾ ಪಶು ವೈದ್ಯಕೀಯ ಆಸ್ಪತ್ರೆಗೆ ಮೂಲಭೂತ ಸೌಲಭ್ಯಗಳ ಬಗ್ಗೆ

544 (1029) ಶ್ರೀ ಅಶೋಕ್ ಶಂಕರ ಕಾಟ್ವೆ (ಹುಬ್ಬಳ್ಳಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಹಾನಗರ ಸಭೆಯ ಅಧೀನದಲ್ಲಿರುವ ಎನ್.ಎಂ.ವಾಡಿಯಾ ಪಶು ವೈದ್ಯಕೀಯ ಆಸ್ಪತ್ರೆಗೆ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ ಅದನ್ನು ಒದಗಿಸಲು ಕಾರಣಗಳೇನು ? ಯಾವಾಗ ಒದಗಿಸಲಾಗುವುದು.

(ಆ) ಈ ಆಸ್ಪತ್ರೆಗೆ ಪ್ರತಿ ವರ್ಷ ಎಷ್ಟು ಮೌಲ್ಯದ ಔಷಧವನ್ನು ಪೂರೈಸಲಾಗುತ್ತಿದೆ ?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಬಂದಿದೆ.

ಆದ್ದರಿಂದ ಹುಬ್ಬಳ್ಳಿ ಮಹಾನಗರ ಸಭೆಯು 7.00 ಲಕ್ಷ ರೂ.ಗಳಲ್ಲಿ ದುರಸ್ತಿ ಕಾರ್ಯ ಕೈಗೊಂಡಿದ್ದು ಮೂಲಭೂತ ಸೌಲಭ್ಯಗಳ ಕೊರತೆಯನ್ನು ಸಂಪೂರ್ಣವಾಗಿ ಸುವ್ಯವಸ್ಥೆಗೊಳಿಸಲಾಗುತ್ತಿದೆ.

ಆ) ರೂ. 1.00 ಲಕ್ಷ

ಗಡಿ ಪ್ರದೇಶದ ಅರಣ್ಯದ ಮರಗಳ್ಳತನ ಹಾಗೂ ಸಮಾಜಘಾತುಕ ಕೆಲಸಗಳು

545 (1010) ಶ್ರೀ ಹೆಚ್.ಡಿ.ಬಸವರಾಜ್ (ವಿರಾಜಪೇಟೆ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಗಡಿ ಪ್ರದೇಶದ ಅರಣ್ಯದಲ್ಲಿ ಅಕ್ರಮ ವಾಗಿ ಮರ ಕಳ್ಳತನ ಹಾಗೂ ಇತರೆ ಸಮಾಜ ಘಾತುಕ ಕೆಲಸಗಳು ಅವ್ಯಾಹತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

2) ಹಾಗಿದ್ದಲ್ಲಿ ಇದನ್ನು ನಿಯಂತ್ರಿಸಲು ಸರ್ಕಾರದವರು ಕೈಗೊಂಡಿರುವ ಅಗತ್ಯ ಕ್ರಮಗಳೇನು ?

ಶ್ರೀ ಮಂಜುನಾಥ್ (ಅರಣ್ಯ ಸಚಿವರು) :

1) ಹೌದು.